ಅ) ಚುನಾಯಿತ ಪ್ರತಿನಿಧಿಗಳಿಗೆ (ಜಿಲ್ಲಾ ಪಂಚಾಯತ್ ಸದಸ್ಯರು, ಗ್ರಾಮ ಸದಸ್ಯರು, ನಗರಾಸಭಾ ಸದಸ್ಯರು ಪುರಸಭಾಸದಸ್ಯರು) ಮಾಸಿಕ ಗೌರವಧನ ಹೆಚ್ಚಿಸುವ ಪ್ರಸ್ತಾವ ಸರ್ಕಾರದ ಮುಂದಿದೆಯೇ? ವಿವರ ನೀಡುವುದು:

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಅ) ಪಂಚಾಯತ್ ಸಂಸ್ಥೆಗಳ ಚುನಾಯಿತ ಸದಸ್ಯರ ಮಾಸಿಕ ಗೌರವಧನ ಹಾಗೂ ಸಭಾ ಉಪವೇಶನ ಶುಲ್ಕಗಳನ್ನು ಈಗಾಗಲೇ ಸರ್ಕಾರವು ಹೆಚ್ಚಿಸಿ ದಿನಾಂಕ 1-8-2003 ರಂದು ಆದೇಶ ಹೊರಡಿಸಿದೆ. ವಿವರ ಈ ಕೆಳಕಂಡಂತಿರುತ್ತದೆ.

ಪಂ.ರಾಜ್ ಸಂಸ್ಥೆಗಳು	ಸಿಟ್ಟಿಂಗ್ ಫೀ ರೂ.ಗಳಲ್ಲಿ	ಅಧ್ಯಕ್ಷ/ ಉಪಾಧ್ಯಕ್ಷರಿಗೆ ಗೌರವ ಧನ ರೂ ಗಳಲ್ಲಿ	ಸದಸ್ಯರ ಮಾಸಿಕ ಗೌರವ ಧನ
ಗ್ರಾಮ ಪಂಚಾಯತ್	100.00	500.00 ಮತ್ತು 300.00	–
ತಾಲ್ಲೂಕು ಪಂಚಾಯತಿ	150.00	2000.00 ಮತ್ತು 1300.00	700.00
ಜಿಲ್ಲಾ ಪಂಚಾಯತಿ	200.00	2750.00 ಮತ್ತು 2050.00	1200.00

ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದಂತೆ

ನಗರ ಸ್ಥಳೀಯ ಸಂಸ್ಥೆಗಳ ಸದಸ್ಯರ ಗೌರವಧನ ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದ್ದು, ನಗರ ಸ್ಥಳೀಯ ಸಂಸ್ಥೆಗಳ ಸಂಪನ್ಮೂಲದ ಮಿತಿಯಲ್ಲಿ ಗೌರವಧನ ಹೆಚ್ಚಿಸುವ ಬಗ್ಗೆ ಪರಿಶೀಲಿಸಲಾಗುವುದು.

ಮುಚ್ಚಲಾಗಿರುವ ಎನ್‌ಜಿಇಎಫ್ ಹಾಗೂ ಮೈಸೂರು ಲ್ಯಾಂಪ್ಸ್ ಕಾರ್ಖಾನೆಗಳ ಕಾರ್ಮಿಕರ ನಿವೃತ್ತಿ ವೇತನದ ಬಗ್ಗೆ

32 (548): ಶ್ರೀ ಸುರೇಶ್ ಕುಮಾರ್ ಎಸ್.ಎಂ.ಎಲ್.ಎ. (ರಾಜಾಜಿನಗರ) ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು ಮತ್ತು ಬಂಡವಾಳ ಹಿಂತೆಗೆಯುವಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಎನ್‌ಜಿಇಎಫ್ ಹಾಗೂ ಮೈಸೂರು ಲ್ಯಾಂಪ್ಸ್ ಕಾರ್ಖಾನೆಗಳನ್ನು ಎಂದಿನಿಂದ ಮುಚ್ಚಲಾಗಿದೆ:

ಆ) ಈ ಕಾರ್ಖಾನೆಗಳಿಗೆ ಈಗಿರುವ ಅಧ್ಯಕ್ಷರುಗಳನ್ನು ಎಂದಿನಿಂದ ನೇಮಕ ಮಾಡಲಾಗಿದೆ:

ಇ) ಈ ಕಾರ್ಖಾನೆಗಳ ಕಾರ್ಮಿಕರುಗಳ ನಿವೃತ್ತಿ ವೇತನ ಮುಂತಾದ ಸಂಗತಿಗಳು ಇತ್ಯರ್ಥವಾಗಿದೆಯೇ? (ವಿವರಗಳನ್ನು ನೀಡುವುದು)

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಬಂಡವಾಳ ಹಿಂತೆಗೆಯುವಿಕೆ ಸಚಿವರು) :

ಅ) 1 ಎನ್‌ಜಿಇಎಫ್ ಲಿಮಿಟೆಡ್ ದಿನಾಂಕ : 20–12–2002 ರಿಂದ ಮುಚ್ಚಲಾಗಿದೆ.

2) ಮೈಸೂರು ಲ್ಯಾಂಪ್ಸ್ ವರ್ಕ್ಸ್ ಲಿಮಿಟೆಡ್ : ದಿನಾಂಕ: 11.5.2003 ರಿಂದ ಮುಚ್ಚಲಾಗಿದೆ.

ಆ) ಎನ್‌ಜಿಇಎಫ್ ಗೆ ಅಧ್ಯಕ್ಷರನ್ನು ದಿನಾಂಕ:27.09.2001 ರಿಂದ ನೇಮಕ ಮಾಡಲಾಗಿದ್ದು, ಮೈಸೂರು ಲ್ಯಾಂಪ್ಸ್ ವರ್ಕ್ಸ್‌ಗೆ 28.9.2001 ರಿಂದ ನೇಮಕ ಮಾಡಲಾಗಿದೆ.

ಇ) 1. ಎನ್‌ಜಿಇಎಫ್ ಲಿಮಿಟೆಡ್ : ಈಗಾಗಲೇ ಸ್ವಯಂ ನಿವೃತ್ತಿ ಹೊಂದಿದ ನೌಕರರಿಗೆ ಎಕ್ಸ್‌ಗ್ರೇಷಿಯಾ, ಗ್ರಾಚ್ಯುಟಿ ಮತ್ತು ರಜಾ ನಗದೀಕರಣ ಸೌಲಭ್ಯಗಳ ಹಣವನ್ನು ಪಾವತಿ ಮಾಡಲಾಗಿದೆ. ಪರಿಷ್ಕೃತ ಕೂಲಿ, ವಾರ್ಷಿಕ ಭತ್ಯೆ ಮತ್ತು ತುಟ್ಟಿಭತ್ಯೆ ಬಾಕಿ (Wage revision, increment & D.A arrears) ಇವುಗಳನ್ನು ಅರ್ಹತೆ ಉಳ್ಳ ನೌಕರರಿಗೆ ಪಾವತಿಸಲು ಬಾಕಿ ಇದೆ. ಇದನ್ನು ಆಸ್ತಿ ವಿಲೇವಾರಿ ಮಾಡಿ ಬಂದ ಹಣದಿಂದ ಪಾವತಿ ಮಾಡಬೇಕಾಗಿದೆ. ಲಿಕ್ವಿಡೇಟರ್ ನೇಮಕಾತಿ ನಂತರ ಆಸ್ತಿ ವಿಲೇವಾರಿ ಮಾಡುವ ಕ್ರಮ ಕೈಗೊಳ್ಳಲಾಗುತ್ತದೆ.

2. ಮೈಸೂರು ಲ್ಯಾಂಪ್ಸ್ ವರ್ಕ್ಸ್ ಲಿಮಿಟೆಡ್ : ಈಗಾಗಲೇ 1197 ಉದ್ಯೋಗಿಗಳಿಗೆ ಸ್ವಯಂ ನಿವೃತ್ತಿ ಯೋಜನೆಯ ಸೌಲಭ್ಯಗಳ ಹಣವನ್ನು ಸಂದಾಯ ಮಾಡಲಾಗಿದೆ. ಈಗ 231 ಸ್ವಯಂ ನಿವೃತ್ತಿ ಕೋರಿ ಅರ್ಜಿ ಸಲ್ಲಿಸಿರುವ ಉದ್ಯೋಗಿಗಳಿಗೆ ಹಣ ಬಿಡುಗಡೆ ಮಾಡಲಾಗುತ್ತಿದೆ. ಆದರೆ, ಇನ್ನುಳಿದ 99 ಉದ್ಯೋಗಿಗಳು ಸ್ವಯಂ ನಿವೃತ್ತಿ ಯೋಜನೆಯಡಿ ಅರ್ಜಿ ಸಲ್ಲಿಸಿರುವುದಿಲ್ಲ, ಇವರಲ್ಲಿ 31 ಉದ್ಯೋಗಿಗಳು ನಿಯೋಜನೆ ಮೇರೆಗೆ ಕೆಲಸ ಮಾಡುತ್ತಿದ್ದಾರೆ. ಕಂಪನಿಯು ಈ ಎಲ್ಲಾ 99 ನೌಕರರನ್ನು ಬಿಡುಗಡೆ ಮಾಡಿದೆ. ಇವರಿಗೆ ಮುಚ್ಚುವಿಕೆ ಪರಿಹಾರ ಪಾವತಿ ಮಾಡಬೇಕಾಗಿದೆ.

ಬಾಗೇಪಲ್ಲಿ ಕ್ಷೇತ್ರದಲ್ಲಿ ಕೂಲಿಗಾಗಿ ಕಾಳು ಯೋಜನೆ

64 (635): ಶ್ರೀ ಸಂಪಂಗಿ ಎನ್. (ಬಾಗೇಪಲ್ಲಿ) ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಾಗೇಪಲ್ಲಿ ವಿಧಾನ ಸಭಾ ಕ್ಷೇತ್ರದಲ್ಲಿ ಕಳೆದ 3 ವರ್ಷಗಳಿಂದಲೂ ಕೂಲಿಗಾಗಿ ಕಾಳು ಯೋಜನೆಯಡಿಯಲ್ಲಿ ಎಷ್ಟು ಜನರಿಗೆ ಉದ್ಯೋಗವನ್ನು ಒದಗಿಸಲಾಗಿದೆ; ಇದಕ್ಕೆ ತಗಲುವ ಅನುದಾನವೇನು;

ಆ) ಯಾವ ಯಾವ ಗ್ರಾಮಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಈ ಯೋಜನೆಯಡಿಯಲ್ಲಿ ಕೈಗೊಂಡು ಪೂರೈಸಲಾಗಿದೆ; ವಿವರಗಳನ್ನು ಒದಗಿಸುವುದು?

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು) :

ಅ) ಬಾಗೇಪಲ್ಲಿ ವಿಧಾನ ಸಭಾ ಕ್ಷೇತ್ರದಲ್ಲಿ ಕಳೆದ 3 ವರ್ಷಗಳಿಂದ ಕೂಲಿಗಾಗಿ ಕಾಳು ಯೋಜನೆಯಡಿಯಲ್ಲಿ 2,32,339 ಜನರಿಗೆ ಉದ್ಯೋಗ ಒದಗಿಸಲಾಗಿದೆ. ಇದಕ್ಕೆ ತಗಲಿರುವ ಅನುದಾನ ರೂ. 3,44,54,959.00

ಆ) ವಿವರಗಳು ಜಿಲ್ಲಾಧಿಕಾರಿಗಳು ಕೋಲಾರ ಜಿಲ್ಲೆರವರ ಕಛೇರಿಯಲ್ಲಿ ಲಭ್ಯವಿರುತ್ತವೆ.